ಬುದ್ಧಿ ಇದೆಯೋ ಇಲ್ವೋ? ಹುಡುಗೀರು... ಅಷ್ಟೂ ಗೊತ್ತಾಗಲ್ವಾ? ಏನಾದರೂ ಹೆಚ್ಚು ಕಮ್ಮಿ ಆಗಿ ಹಳ್ಳದೊಳಗೆ ಬಿದ್ದು ತೇಲಿ ಹೋಗಿದ್ದರೆ ಏನು ಗತಿ? ಮಳೆ ನಿಂತು ಹಳ್ಳ ಇಳಿದ ಮೇಲೆ ಬರಲಿಕ್ಕೆ ನಿಮಗೇನು ದಾಡಿಯಾಗಿತ್ತು?' ಎಂದವರೇ ತಲೆ, ಮೈ ಒರೆಸಿಕೊಂಡು ಬಟ್ಟೆ ಬದಲಿಸಿಕೊಳ್ಳಲು ಹೇಳಿ, ಊಟಕ್ಕೆ ಬಿಸಿಬಿಸಿ ಅಡುಗೆಯನ್ನು ಬಡಿಸಿದರು.

ಇನ್ನೊಂದು ಮಳೆಗಾಲದಲ್ಲೂ ಹೀಗೇ ಆಯಿತು. ಆಗ ನಾನೊಬ್ಬಳೇ ಇದ್ದೆ. ಕಾಲೇಜಿಗೆ ಹೋಗಲೆಂದು ಪೇಟೆಗೆ ಹತ್ತಿರದ ದಾರಿಯೆಂದು ನಮ್ಮ ಗದ್ದೆಯ ಹಿಂಬದಿ ಇರುವ ಹಳ್ಳಕ್ಕೆ ಇಳಿದೆ. ಬೆಳಗ್ಗೆಯಷ್ಟೇ ಜೋರಾಗಿ ಮಳೆ ಬಂದು ನಿಂತಿದ್ದರೂ, ಹಳ್ಳ ತುಂಬಿ ಹರಿಯುತ್ತಿತ್ತು. ಕೊಡೆ ಮಡಿಸಿ, ಪುಸ್ತಕಗಳ ಜೊತೆ ಇಟ್ಟುಕೊಂಡೆ. ಅಷ್ಟೇನೂ ಆಳ ಇರಲಿಕ್ಕಿಲ್ಲ ಎಂದುಕೊಂಡ ನನ್ನ ಊಹೆ ತಪ್ಪಾಯಿತು. ಹಳ್ಳದ ಮಧ್ಯೆ ಬರುವಾಗ ಸೊಂಟಮಟ್ಟ ನೀರು ತುಂಬಿದ್ದು ನೋಡಿ ಗಾಬರಿಯಾಯಿತು. ಆದರೆ, ಮುಂದೆ ಹೋದರೂ ಅಷ್ಟೇ ದೂರ, ಹಿಂದೆ ಬಂದರೂ ಅಷ್ಟೇ ದೂರ! 'ನಾನು, ಜೊತೆಗೆ ಪುಸ್ತಕಗಳು ಹಳ್ಳಕ್ಕೆ ಬಿದ್ದರೆ ನೀರುಪಾಲಾಗುವುದೇ... ಆವತ್ತು ಇದಕ್ಕಿಂತ ರಭಸದಿಂದ ಹರಿಯುತ್ತಿದ್ದ ಹಳ್ಳವನ್ನೇ ದಾಟಿದ್ದೇನೆ... ಏನಾದರಾಗಲಿ... ಮುಂದೆ ಹೋಗಿಯೇ ಬಿಡುವುದು... ನೀರಿಗಿಳಿದ ಮೇಲೆ ಮಳೆಯೇನು ಚಳಿಯೇನು... ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ...' ಎಂದುಕೊಳ್ಳುತ್ತಾ ಅಂತೂ ಇಂತೂ ಹಳ್ಳವನ್ನು ದಾಟಿಯೇ ಬಿಟ್ಟೆ! ಹಳ್ಳ ದಾಟಿ ದಂಡೆಯ ಮೇಲೆ ಹತ್ತಿ ನಿಂತಾಗ ಏನೋ ದೊಡ್ಡ ಸಾಧನೆ ಮಾಡಿದೆ ಎನ್ನುವ ಭಾವ. ಮನೆಯಲ್ಲಿ ಇದನ್ನು ಹೇಳಿದರೆ ಮತ್ತೆ ಬೈಗುಳ ತಿನ್ನಬೇಕಾಗುತ್ತದೆ ಎಂದು ಹೇಳಲೇ ಇಲ್ಲ.

ಇನ್ನು ಮಳೆಗಾಲದಲ್ಲಿ ನಾವು ಆಡುತ್ತಿದ್ದ ಆಟಗಳು ಮೆದುಳಿಗೆ ಕಸರತ್ತು ನೀಡುತ್ತಾ, ಮನಸ್ಸಿಗೆ ಮುದ ನೀಡುತ್ತಿದ್ದವು. ಗಣಿತದ ಮೂಲ ಸಿದ್ಧಾಂತಗಳನ್ನು ಕೂಡ ಈ ಆಟಗಳ ಮೂಲಕವೇ ಕಲಿಯುತ್ತಿದ್ದೆವು. ನಮ್ಮೊಂದಿಗೆ ಹಿರಿಯರೂ ಕೂಡ ಆಟವಾಡಲು ಕುಳಿತುಕೊಳ್ಳುತ್ತಿದ್ದರು. ನಾವು ವಾರಿಗೆಯವರೊಂದಿಗೆ ಜಗಳವಾಡುವಂತೆಯೇ ಹಿರಿಯರೊಂದಿಗೂ ಜಗಳವಾಡುತ್ತಿದ್ದೆವು. ಅವರೂ ಕೂಡ ಹುಸಿಕೋಪ ತೋರಿಸುತ್ತಾ, ಆಟವಾಡುತ್ತಾ ಬೇಸರ ಕಳೆಯುತ್ತಿದ್ದರು. ಚೌಕಾಬಾರ, ಚೆನ್ನೆಮಣೆ, ಕೇರಂ, ಐದು ಕಲ್ಲುಗಳಾಟ, ಅಂತ್ಯಾಕ್ಷರಿ, ಯಾವುದಾದರೂ ಒಂದು ಅಕ್ಷರದಿಂದ ಪ್ರಾರಂಭವಾಗುವ ಊರು–ಹೆಸರು–ಸಿನಿಮಾ–ಪ್ರಾಣಿ–ಪಕ್ಷಿ–ವಸ್ತುಗಳ ಹೆಸರು ಬರೆಯುವುದು, ಕಣ್ಣಾಮುಚ್ಚಾಲೆ, ಹಗ್ಗ ಜಗ್ಗಾಟ, ಹಗ್ಗದಾಟ, ಅಡುಗೆಮನೆ ಆಟ, 'ಮಳೆ ಬಂತು ಗಿಳಿ ಪೋ ಪೋ...' ಹೀಗೆ ಹಲವಾರು ಆಟಗಳನ್ನು ಮಳೆಗಾಲ ಮುಗಿಯುವವರೆಗೂ ಮನೆಯೊಳಗೇ ಆಡುತ್ತಿದ್ದೆವು. ಕೆಲವು ಆಟಗಳಿಗೆ ಹಾಡುಗಳೂ ಇರುತ್ತಿದ್ದವು. ಐದು ಕಲ್ಲಿನಾಟ ಆಡುವಾಗ 'ಹಸುವಿಗೆ ಬಾಲ ಒಂದು/ಬೆಕ್ಕಿಗೆ ಕಿವಿಗಳು ಎರಡು/ಶಿವನಿಗೆ ಕಣ್ಣುಗಳು ಮೂರು/ಮಂಚಕ್ಕೆ ಕಾಲ್ಗಳು ನಾಲ್ಕು/ಕೈಗಳ ಬೆರಳು ಐದು/ನೊಣಕ್ಕೆ ಕಾಲ್ಗಳು ಆರು/ವಾರಕೆ ದಿನಗಳು ಏಳು/ದಿಕ್ಕುಗಳಿರುವುದು ಎಂಟು/ಗ್ರಹಗಳು ಇರುವುದು ಒಂಬತ್ತು/ರಾವಣನಿಗೆ ತಲೆ ಹತ್ತು' ಎಂದು ಹಾಡಿನ ಒಂದೊಂದು ಸಾಲಿಗೂ ಮೇಲ್ಗಡೆ ಕಲ್ಲೆಸೆಯುತ್ತಾ, ಅದನ್ನು ಹಿಡಿಯುವುದರೊಳಗೆ ಕೆಳಗಿರುವ ಕಲ್ಲನ್ನು ಕೂಡ ಹಿಡಿದುಕೊಳ್ಳಬೇಕಿತ್ತು. ಎಲ್ಲಾ ಆಟಗಳಲ್ಲೂ ಜಗಳ, ಮತ್ತೆ ಒಂದಾಗುವುದು ಇದ್ದೇ ಇರುತ್ತಿತ್ತು. ಮಳೆಯಲ್ಲಿ ರಸ್ತೆಯ ಮೇಲೆ ಹರಿಯುವ ನೀರಿಗೆ ಕಾಗದದ ದೋಣಿ ಮಾಡಿ ಬಿಟ್ಟು ಯಾರ ದೋಣಿ ಎಷ್ಟು ಹೊತ್ತಿನವರೆಗೆ ಇತ್ತು, ಎಷ್ಟು ದೂರ ಹೋಯಿತು ಎಂದು ನೋಡುವುದೂ ಇತ್ತು.

ಎಲ್ಲಾ ಋತುಗಳಿಗಿಂತ ವರ್ಷಋತು ನಮ್ಮ ಮನಸ್ಸಿನಲ್ಲಿ ಬಹಳಷ್ಟು ನೆನಪುಗಳನ್ನು ಉಳಿಸುತ್ತದೆ. ಅನ್ನದಾತ ಕೂಡ ಮಳೆಗಾಗಿಯೇ ಕಾಯುತ್ತಿರುತ್ತಾನೆ. ಪ್ರತಿ ವರ್ಷ ಬೀಳುವ ಮಳೆ ತಾಜಾ ಆಗಿ ಹೊಸತನದೊಂದಿಗೆ ಸುರಿಯುತ್ತದೆ. ಅದು ಕೆಲವೊಮ್ಮೆ ಅವಘಡಗಳನ್ನು ಸೃಷ್ಟಿಸಲೂಬಹುದು, ಕೆಲವೊಮ್ಮೆ ಆನಂದವನ್ನೂ ತುಂಬಬಹುದು. ಮಳೆಯು ಭೂಮಿಯ ಮೇಲೆ ಮಾನವನು ಸೃಷ್ಟಿಸಿದ ಕಲ್ಮಷಗಳನ್ನು ತೊಳೆದು, ಗಿಡ–ಮರಗಳಿಗೆ ಜಳಕ ಮಾಡಿಸುತ್ತಾ, ಪ್ರಕೃತಿಯನ್ನು ಹಸಿರಾಗಿಸುತ್ತಾ, ಕಣ್ಮನಗಳಿಗೆ ತಂಪೆರೆಯುವಂತೆ ಮಾಡುತ್ತದೆ ಅನ್ನುವುದೂ ಅಷ್ಟೇ ಸತ್ಯ. ●